KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-435/ UGCE/2022-23/21 Date: 19 APR 2023

## ಸುತ್ತೋಲೆ-1

**ವಿಷಯ:** NEP ಅಡಿಯಲ್ಲಿ 2021-22ನೇ ಸಾಲಿನಲ್ಲಿ ಸ್ನಾತಕ ಪದವಿಯ 1ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಪಾಸಾಗದೇ ಇರುವ ವಿದ್ಯಾರ್ಥಿಗಳಿಗೆ 2022-23ನೇ ಸಾಲಿಗೆ 2ನೇ ಸೆಮಸ್ಟರ್‌ಗೆ ಪ್ರವೇಶ ಪಡೆಯಲು ಅನುಮತಿ ನೀಡುವ ಬಗ್ಗೆ ಹಾಗೂ ಸಮ (2 / 4ನೇ) ಸೆಮಿಸ್ಟರ್‌ಗಳಿಗೆ ವರ್ಗಾವಣೆಗೊಳ್ಳುವ ಕುರಿತು.

**ಉಲ್ಲೇಖ:** 1. ಕಚೇರಿ ಸುತ್ತೋಲೆ ಸಂ.KU/Aca(S&T)/SSL-435/2022-23/15, ದಿ: 15.04.2023.

2. ಕಚೇರಿ ಸುತ್ತೋಲೆ ಸಂ.KU/Aca(S&T)/RPH-394A/2021-22/1156,ದಿ. 29.10.2021.
3. ಸರ್ಕಾರದ ಅಧೀನ ಕಾರ್ಯದರ್ಶಿಗಳು(ವಿಶ್ವವಿದ್ಯಾಲಯ 2)ಉನ್ನತ ಶಿಕ್ಷಣ ಇಲಾಖೆ ಇವರ ಆದೇಶ ಸಂಖ್ಯೆ: ಇಡಿ 27 ಇಜಿಒವಿ2022 ಬೆಂಗಳೂರು, ದಿನಾಂಕ: 28.02.2023.
4. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 19/04/2023

------

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ 01ರ ಪ್ರಕಾರ ಎಲ್ಲ ಸ್ನಾತಕ ಪದವಿ ತರಗತಿಗಳ 2, 4, 6 ಮತ್ತು 8ನೇ ಸೆಮಿಸ್ಟರ್‌ಗಳ ವಿದ್ಯಾರ್ಥಿಗಳಿಗೆ ಪ್ರವೇಶ ಮತ್ತು ಸೆಮಿಸ್ಟರ್ ಪ್ರಾರಂಭದ ದಿನಾಂಕ: 24.04.2023 ಎಂದು ಸೂಚಿಸಲಾಗಿದ್ದು, 2022-23ರ ಸಾಲಿನಲ್ಲಿ NEP ಅಡಿಯಲ್ಲಿ ಮೊದಲನೆಯ ಸೆಮಿಸ್ಟರ್‌ಗೆ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳಿಗೆ ಮಾತ್ರ ಎರಡನೆಯ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ತಿಳಿಸಲಾಗಿರುತ್ತದೆ.

ಆದರೆ, ಉಲ್ಲೇಖ 02ರ ಕ.ವಿ.ವಿ. ವಿನಿಯಮಾವಳಿಗಳ ಕಂಡಿಕೆ 6.3(a-ii) ಪ್ರಕಾರ NEP ಅಡಿಯಲ್ಲಿ 2021-22ನೇ ಸಾಲಿನಲ್ಲಿ ಮೊದಲನೆಯ ಸೆಮಿಸ್ಟರ್‌ಗೆ ಪ್ರವೇಶ ಪಡೆದುಕೊಂಡು ಎರಡನೆಯ ಸೆಮಿಸ್ಟರ್‌ಗೆ ಶಿಕ್ಷಣವನ್ನು ಮುಂದುವರೆಸದೇ ಇದ್ದ ವಿದ್ಯಾರ್ಥಿಗಳಿಗೂ ಕೂಡಾ 2022-23ನೇ ಸಾಲಿಗೆ ಎರಡನೆಯ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ, 2021-22ನೇ ಸಾಲಿನ ಮೊದಲನೆಯ ಸೆಮಿಸ್ಟರ್‌ನಲ್ಲಿ ಅಭ್ಯಸಿಸಿ 75% ರಷ್ಟು ಹಾಜರಾತಿ ಪೂರೈಸಿ, ಪರೀಕ್ಷಾ ಅರ್ಜಿ ತುಂಬಿದ ವಿದ್ಯಾರ್ಥಿಗಳಿಗೂ ಕೂಡಾ 2022-23ನೇ ಸಾಲಿನ ಪ್ರಸ್ತುತ ಎರಡನೆಯ ಸೆಮಿಸ್ಟರ್‌ಗೆ ಪ್ರವೇಶ ನೀಡಲು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು, ಉಲ್ಲೇಖ 02 ಮತ್ತು 03ರ ಸರ್ಕಾರಿ ಆದೇಶದ ಪ್ರಕಾರ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಅಂದರೆ 1, 3, 5 ಮತ್ತು 7ನೇ ಸೆಮಿಸ್ಟರ್‌ಗೆ ಮಾತ್ರ ವರ್ಗಾವಣೆಗೆ ಅವಕಾಶವಿರುತ್ತದೆ. 2, 4, 6 ಮತ್ತು 8ನೇ ಸೆಮಿಸ್ಟರ್‌ಗಳಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದ್ದರಿಂದ, ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು ಈ ಮೇಲಿನಂತೆ ಸೂಕ್ತ ಕ್ರಮಕೈಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಅಡಕ: ಮೇಲಿನಂತೆ.

19/4
ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.
(ಕ.ವಿ.ವಿ. ಅಂತರ್ಜಾಲ ಹಾಗೂ ಮಿಂಚಂಚೆ ಮೂಲಕ ಬಿತ್ತರಿಸಲಾಗುವುದು)

**ಪ್ರತಿ:**

1. ನಿರ್ದೇಶಕರು, ಕಾಲೇಜು ಅಭಿವೃದ್ಧಿ / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
2. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ನೊಡಲ್ ಅಧಿಕಾರಿಗಳು, UUCMS ಘಟಕ, ಕ.ವಿ.ವಿ. ಧಾರವಾಡ.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
7. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.

Annexure-I

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸ್ವಾತಂತ್ರ್ಯದ ಅಮೃತ ಮಹೋತ್ಸವ

## NEP ಅಡಿಯಲ್ಲಿ ಎಲ್ಲ ಸ್ನಾತಕ ಪದವಿ ತರಗತಿಗಳಿಗೆ 2 ಮತ್ತು 4ನೇ ಸೆಮಿಸ್ಟರ್ ಹಾಗೂ ಸಿ.ಬಿ.ಸಿ.ಎಸ್. 6 ಮತ್ತು 8ನೇ ಸೆಮಿಸ್ಟರ್‌ನ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿ: 2022–23

| ಕ್ರ.ಸಂ. | ವಿವರ | ದಿನಾಂಕ |
|---|---|---|
| | **NEP ಅಡಿಯಲ್ಲಿ 2 ಮತ್ತು 4ನೇ ಸೆಮಿಸ್ಟರ್: 2022–23** | |
| 1 | NEP ಅಡಿಯಲ್ಲಿ ಪದವಿ ತರಗತಿಗಳ **2 ಮತ್ತು 4ನೇ** ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಕೆಲಸದ **ಪ್ರಾರಂಭದ ದಿನಾಂಕ** | **24.04.2023** |
| 2 | NEP ಅಡಿಯಲ್ಲಿ ಪದವಿ ತರಗತಿಗಳ **2 ಮತ್ತು 4ನೇ** ಸೆಮಿಸ್ಟರ್‌ನ **ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಮುಕ್ತಾಯದ ದಿನಾಂಕ ಹಾಗೂ ಮುಂದಿನ ದಿನಾಂಕದಿಂದ ರಜೆ ಪ್ರಾರಂಭ (ಕೊನೆಯ ದಿನಾಂಕದೊಳಗೆ ವಿಶ್ವವಿದ್ಯಾಲಯದ ಪ್ರಾಯೋಗಿಕ ಪರೀಕ್ಷೆಗಳನ್ನು ಮುಕ್ತಾಯಗೊಳಿಸತಕ್ಕದ್ದು)** | **12.08.2023** |
| 3 | NEP ಅಡಿಯಲ್ಲಿ ಪದವಿ ತರಗತಿಗಳ **2 ಮತ್ತು 4ನೇ** ಸೆಮಿಸ್ಟರ್ ಥಿಯರಿ ಪರೀಕ್ಷೆ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನದ ಅವಧಿ<br>**ವಿ.ಸೂ.:** ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು. | **13.08.2023 to 03.10.2023** |
| 4 | ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ NEP ಅಡಿಯಲ್ಲಿ ಪದವಿ ತರಗತಿಗಳ 1, 3, 5 ಮತ್ತು **7ನೇ ಸೆಮಿಸ್ಟರ್ ಶೈಕ್ಷಣಿಕ ವರ್ಷ ಪ್ರಾರಂಭದ ದಿನಾಂಕ** | **04.10.2023** |
| | **CBCS ಅಡಿಯಲ್ಲಿ 6 ಮತ್ತು 8ನೇ ಸೆಮಿಸ್ಟರ್: 2022–23** | |
| 5 | **CBCS** ಅಡಿಯಲ್ಲಿ ಪದವಿ ತರಗತಿಗಳ **6 ಮತ್ತು 8ನೇ** ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಕೆಲಸದ **ಪ್ರಾರಂಭದ ದಿನಾಂಕ** | **24.04.2023** |
| 6 | **CBCS** ಅಡಿಯಲ್ಲಿ ಪದವಿ ತರಗತಿಗಳ **6 ಮತ್ತು 8ನೇ** ಸೆಮಿಸ್ಟರ್‌ನ **ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಮುಕ್ತಾಯದ ದಿನಾಂಕ ಹಾಗೂ ಮುಂದಿನ ದಿನಾಂಕದಿಂದ ರಜೆ ಪ್ರಾರಂಭ (ಕೊನೆಯ ದಿನಾಂಕದೊಳಗೆ ವಿಶ್ವವಿದ್ಯಾಲಯದ ಪ್ರಾಯೋಗಿಕ ಪರೀಕ್ಷೆಗಳನ್ನು ಮುಕ್ತಾಯಗೊಳಿಸತಕ್ಕದ್ದು)** | **12.08.2023** |
| 7 | CBCS ಅಡಿಯಲ್ಲಿ ಪದವಿ ತರಗತಿಗಳ **6 ಮತ್ತು 8ನೇ** ಸೆಮಿಸ್ಟರ್ ಥಿಯರಿ ಪರೀಕ್ಷೆ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನದ ಅವಧಿ / ರಜೆ (**Vacation**)<br>ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು. | **13.08.2023 to 03.10.2023** |
| 8 | ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಮುಂದಿನ **ಶೈಕ್ಷಣಿಕ ವರ್ಷ ಪ್ರಾರಂಭದ** ದಿನಾಂಕ | **04.10.2023** |

***ಸೂಚನೆ:***

1. **ಆದಾಗ್ಯೂ, ವಿದ್ಯಾರ್ಥಿಗಳು 1, 3 ಮತ್ತು 5ನೇ ಸೆಮಿಸ್ಟರ್‌ನಲ್ಲಿ ಶೇ. 75 ರಷ್ಟು ಹಾಜರಾತಿ ಪೂರೈಸಿ 1, 3 ಮತ್ತು 5ನೇ ಸೆಮಿಸ್ಟರ್‌ನಲ್ಲಿ ಪರೀಕ್ಷಾ ಅರ್ಜಿಯನ್ನು ತುಂಬಿದ ವಿದ್ಯಾರ್ಥಿಗಳಿಗೆ ಮಾತ್ರ 2, 4, 6 ಮತ್ತು 8ನೇ ಸೆಮಿಸ್ಟರ್‌ನಲ್ಲಿ ಸೆಮಿಸ್ಟರ್‌ಗೆ ಪ್ರವೇಶ ನೀಡತಕ್ಕದ್ದು.**
2. ಮೇಲೆ ನಮೂದಿಸಿದ ದಿನಗಳು ರಜೆ ಎಂದು ಘೋಷಿಸಿದಲ್ಲಿ ತದನಂತರದ ದಿನವನ್ನು ಪರಿಗಣಿಸುವದು.
3. ಪರೀಕ್ಷೆಗಳ ವೇಳಾಪಟ್ಟಿಗಳನ್ನು ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ ಇವರು ಕಾಲಕಾಲಕ್ಕೆ ಪ್ರಕಟಿಸುವರು.
4. ಯಾವುದೇ ಕಾರಣಕ್ಕೂ ಹುಂಡಿಯನ್ನು (ಡಿ.ಡಿ.) ಸ್ವೀಕರಿಸಲಾಗುವುದಿಲ್ಲ.
5. **NEP ಅಡಿಯಲ್ಲಿ 2 ಮತ್ತು 4ನೇ ಸೆಮಿಸ್ಟರ್** ವಿಧಿಸಿದ
   ಅ. **NEP ಅಡಿಯಲ್ಲಿ 2ನೇ ಸೆಮಿಸ್ಟರ್‌ಗೆ ಕಡ್ಡಾಯವಾಗಿ ಎಲ್ಲ ವಿದ್ಯಾರ್ಥಿಗಳಿಗೆ ಪ್ರೊಸ್‌ಸಿಂಗ್ ಶುಲ್ಕ = ರೂ. 250/–**
   ಬ. **NEP ಅಡಿಯಲ್ಲಿ 4ನೇ ಸೆಮಿಸ್ಟರ್‌ಗೆ ಕಡ್ಡಾಯವಾಗಿ ಎಲ್ಲ ವಿದ್ಯಾರ್ಥಿಗಳಿಗೆ ಪ್ರೊಸ್‌ಸಿಂಗ್ ಶುಲ್ಕ = ರೂ. 250/– ಮತ್ತು "Financial Education & Investment Awareness" ಶುಲ್ಕ = ರೂ. 150/–.**
6. ಶುಲ್ಕಗಳನ್ನು ಕಡ್ಡಾಯವಾಗಿ **ಈ ಹಿಂದಿನಂತೆ** Online Payment of fees (State Bank Collect) ಆನ್‌ಲೈನ್ ಮುಖಾಂತರ ಈ ಕೆಳಗಿನ ವೆಬ್‌ಸೈಟ್‌ಗೆ ಭರಿಸುವುದು. (www.kud.ac.in/www.onlines).

**ಕುಲಸಚಿವರು**